

# ಬೈಸಿಕಲ್ ಅವತಾರ!



ವಾಹನ ಸವಾರರಿಗೆ ಏನು ಇಷ್ಟವೋ ಅದನ್ನು ಕೊಡುವಲ್ಲಿ ಜಪಾನ್ ಮತ್ತು ಜರ್ಮನಿಯ ವಾಹನ ತಯಾರಕರು ಸದಾ ಮುಂದಿರುತ್ತಾರೆ. ಅದರಲ್ಲೂ ಸೈಕಲ್ ಮತ್ತು ಬೈಕುಗಳ ಕುರಿತು ಪ್ರತಿವರ್ಷವೂ ಬಿಡುಗಡೆಯಾಗುವ ವೈವಿಧ್ಯಮಯ ತಯಾರಿಕೆಗಳನ್ನು ಕಂಡರೆ ಕೊಳ್ಳದೆ ಇರಲು ಮನಸ್ಸೇ ಆಗದು. ಕ್ರೀಡಾ ಪ್ರಿಯರನ್ನು ಗಮನದಲ್ಲಿರಿಸಿಕೊಂಡು ಈ ನಾವೀನ್ಯವನ್ನು ರೂಪಿಸುವುದರ ಜೊತೆಗೆ ಎಲ್ಲ ವರ್ಗದವರನ್ನೂ ಆಕರ್ಷಿಸಲು ಹತ್ತು ಹಲವು ವೈಶಿಷ್ಟ್ಯಗಳನ್ನೂ ಅಳವಡಿಸುತ್ತಾರೆ.

ಜಪಾನಿನ ಟೊಟೊ ಕಂಪೆನಿ ಜೈವಿಕ ಅನಿಲದಿಂದ ಓಡುವ ಬೈಕನ್ನು ತಯಾರಿಸಿದೆ. ಇದರಲ್ಲಿರುವ ಆಸನವನ್ನು ಶೌಚಾಲಯವಾಗಿ ಬಳಸಬಹುದು. ಒಳಗಿಳಿದ ಶೌಚ ಇಲ್ಲಿ ಅನಿಲವಾಗಿ ಬದಲಾಗಿ ಬೈಕಿಗೆ ಇಂಧನವಾಗುತ್ತದೆ. ಹಳೆಯ ಬೂಟುಗಳನ್ನು ಬೈಕಿನ ಚಕ್ರಗಳಿಗೆ ಜೋಡಿಸಿ ಮನುಷ್ಯನು ಬೂಟುಗಾಲಿನಲ್ಲಿ ನಡೆದ ಹಾಗೆ ಚಲಿಸುವ ಮೋಜನ್ನು ಸವಿಯಲು ಅದು ಅನುವು ಮಾಡಿದೆ. ಡೈನೋಸಾರ್ ನಂತಿರುವ ಆಸನವಿರುವ ಸೈಕಲ್, ಬಿಸಿಲು ಹೆಚ್ಚಾದಾಗ ಬಿಡಿಸಿಕೊಳ್ಳುವ ಕೊಡೆ, ಮಲಗಿಕೊಂಡು ಸವಾರಿ ಮಾಡುವ ಸೌಲಭ್ಯ ಇದೆಲ್ಲವನ್ನೂ ಅಳವಡಿಸುವುದರ ಜೊತೆಗೆ ಶಿರಸ್ತ್ರಾಣಗಳಲ್ಲಿಯೂ ಹಲವೊಂದು ಮಾದರಿಗಳು ಬಂದಿವೆ. ಈ ರೀತಿ ಬೈಸಿಕಲ್ ಅವತಾರಗಳನ್ನು ಎಲ್ಲಾದರೂ ನೋಡಿದ್ದೀರಾ?

■ ಪ. ರಾಮಕೃಷ್ಣ ಶಾಸ್ತ್ರಿ

